ದನ್ನು ಯಾವರೀತಿ ತೀರ್ಮಾನ ಮಾಡುತ್ತಾರೆ? ಈ ಮಧ್ಯೆ ಎಷ್ಟು ಕಂಟಿಂಜೆಗಳು ತೊಂದರೆ ಪಡಬೇಕು? ೨೦, ೩೦, ೪೦ ರೂಪಾಯಿಗಳಿಗೆ ಹಲವಾರು ವರ್ಷಗಳಿಂದ ಸೇವೆ ಮಾಡಿದ್ದಕ್ಕೆ ಇದು ಕೊಡುಗೆಯೇ?

ಶ್ರೀ ಬಿ ಎಸ್. ಯಡಿಯೂರಪ್ಪ.—ಮೊದಲು ಇದಕ್ಕೆ ತಡೆಯಾಜ್ಞೆ ಕೊಡಲಿ. ನಂತರ ತೀರ್ಮಾನ ತೆಗೆದುಕೊಳ್ಳಲಿ.

ಅಧ್ಯಕ್ಷರು. – ಇದನ್ನು ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಕುಳಿತುಕೊಳ್ಳಿ. ಆವರೂ ಉತ್ತರ ನೋಡಿಕೊಂಡು ಬರಲಿ. ನಿಮಗೂ ಅವಕಾಶ ಸಿಗುತ್ತದೆ.

ದಾವಣಗೆರೆ ನಗರದಲ್ಲಿರುವ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ

೨೪೯. ಶ್ರೀ ಪಂಪಾಪತಿ(ದಾವಣಗೆರೆ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ದಯೆಯಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದಲ್ಲಿರುವ ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಸಂಖ್ಯೆ ಎಷ್ಟು ? ಹಾಗೂ ಸದರಿ ವಿದ್ಯಾಸಂಸ್ಥೆಗಳಲ್ಲಿ ವಿದ್ಯಾರ್ಥಿಗಳಿಗೆ ಅನುಗುಣವಾಗಿ ಉಪಾಧ್ಯಾಯರುಗಳು ಇದ್ದಾರೆಯೆ ಹಾಗೂ ಕೊರತೆಗಳಿವೆಯೇ ?

ಆ) ಹಾಗಿಲ್ಲದಿದ್ದಲ್ಲಿ, ಸರಕಾರದವರು ಈ ಬಗ್ಗೆ ಕೈಕೊಂಡ ಕ್ರಮಗಳೇನು ?

ಶ್ರೀ ಎಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ೨೯
ಪ್ರೌಢ ಶಾಲೆಗಳ ಸಂಖ್ಯೆ ೫

ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ೬೪ ಉಪಾಧ್ಯಾಯರುಗಳ ಕೊರತೆ ಇರುತ್ತದೆ. ೧೯ ಪ್ರಾಥಮಿಕ ಶಾಲೆಗಳು ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ.

ಆ) ಹೆಚ್ಚುವರಿ ಶಿಕ್ಷಕರು ಇರುವ ಶಾಲೆಗಳಿಂದ ನಿಯೋಜನೆ ಮೂಲಕ ಶಿಕ್ಷಕರ ಕೊರತೆಯನ್ನು ನಿವಾರಿಸಲಾಗಿದೆ.

ಸ್ವಂತ ಕಟ್ಟಡವಿಲ್ಲದ ಎಲ್ಲಾ ೧೯ ಶಾಲೆಗಳೂ ಬಾಡಿಗೆ ಕಟ್ಟಡಗಳಲ್ಲಿ ಕೆಲಸ ನಿರ್ವಹಿಸುತ್ತದೆ.

ಶ್ರೀ ಪಂಪಾಪತಿ.— ಅಧ್ಯಕ್ಷರೆ, ಹೆಚ್ಚುವರಿ ಶಿಕ್ಷಕರು ಇರುವ ಶಾಲೆಗಳಿಂದ ನಿಯೋಜನೆ ಮಾಡುವುದರಿಂದ ಶಿಕ್ಷಕರ ಕೊರತೆ ನಿವಾರಿಸಲಾಗಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇವರ ಅಭಿಪ್ರಾಯದ ಪ್ರಕಾರ ಯಾವ ಶಾಲೆಯಲ್ಲಿಯೂ ಶಿಕ್ಷಕರ ಕೊರತೆ ಇಲ್ಲ ಎಂಬ ಅಭಿಪ್ರಾಯ ಬರುತ್ತದೆ. ಒಂದೊಂದು ತರಗತಿಯಲ್ಲಿ ಎಷ್ಟು ವಿದ್ಯಾರ್ಥಿಗಳಿರಬೇಕು ಎಂಬುದನ್ನು ನಿಗದಿ ಮಾಡಿದ್ದೀರಾ ? ಈ ಬಗ್ಗೆ ಮಂತ್ರಿಗಳು ಉತ್ತರ ಹೇಳಬೇಕು. ದಾವಣಗೆರೆಯಲ್ಲಿ ಶಿಕ್ಷಕರ ಕೊರತೆ ಇದೆ. ಮಾನ್ಯ ಮಂತ್ರಿಗಳಿಗೆ ಸರಿಯಾಗಿ ಮಾಹಿತಿ ಕೊಟ್ಟಿಲ್ಲ ಎಂಬುದು ನನ್ನ ಅಭಿಪ್ರಾಯ. ತಾವು ಸರಿಯಾಗಿ ಮಾಹಿತಿಯನ್ನು ತರಿಸಿಕೊಂಡು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ೧೯ ಶಾಲೆಗಳಿಗೆ ಸ್ವಂತ ಕಟ್ಟಡವಿಲ್ಲದ ಪ್ರಯುಕ್ತ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಇದು ಬಹಳ ನಾದುರಸ್ತಿಯಲ್ಲಿದೆ. ಮಳೆ ಬಂದರೆ ಸೋರುತ್ತಿದೆ. ಯಾವ ಸಂದರ್ಭದಲ್ಲಿ ಕಟ್ಟಡಗಳು ಬಿದ್ದು ಮಕ್ಕಳಿಗೆ ಅನಾಹುತವಾಗುತ್ತದೆಯೋ ಗೊತ್ತಿಲ್ಲ. ಅಂಥ ಕಟ್ಟಡಗಳನ್ನು ದಯವಿಟ್ಟು ಆದಷ್ಟು ದುರಸ್ತಿ ಮಾಡಿ ಸುವ್ಯವಸ್ಥಿತ ವ್ಯವಸ್ಥೆಯನ್ನು ಮಾಡುವುದಕ್ಕೆ ತೀವ್ರಗತಿಯಲ್ಲಿ ಏನು ಕಾರ್ಯಕ್ರಮ ಕೈಗೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು ?

ಶ್ರೀ ಎಚ್. ಜಿ. ಗೋವಿಂದೇಗೌಡ.— ಹೆಚ್ಚುವರಿ ಇರತಕ್ಕ ಶಾಲೆಗಳಿಂದ ಉಪಾಧ್ಯಾಯರನ್ನು ನಿಯೋಜನೆ ಮಾಡತಕ್ಕ ವ್ಯವಸ್ಥೆ ಬಗ್ಗೆ ಈಗಾಗಲೇ ಹೇಳಿದ್ದೇನೆ. ನಮ್ಮ ಸ್ನೇಹಿತರು ಹೇಳಿದ ಹಾಗೆ ಟೌನ್‌ಗಳಲ್ಲಿ ಕೆಲವು ಕಡೆ ಹೆಚ್ಚು ಉಪಾಧ್ಯಾಯರಿದ್ದಾರೆ. ಆ ಉಪಾಧ್ಯಾಯರನ್ನು ಕಡಿಮೆ ಸಂಖ್ಯೆಯಿರುವ ಕಡೆ ನಿಯೋಜನೆ ಮಾಡುವ ವ್ಯವಸ್ಥೆಯನ್ನು ದಾವಣಗೆರೆಯಲ್ಲಿ ಮಾಡಿದ್ದೇವೆ. ಎರಡನೇಯ ಪ್ರಶ್ನೆಗೆ ಉತ್ತರ, ೫೦ ಜನ ಮಕ್ಕಳಿಗೆ ಒಬ್ಬರು ಉಪಾಧ್ಯಾಯರು ಇರಬೇಕೆಂದು ಕಾನೂನಿನಲ್ಲಿ ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ ೧೮ ಸಾವಿರ ಜನ ಉಪಾಧ್ಯಾಯರುಗಳನ್ನು ಏನು ನೇಮಕ ಮಾಡಿದ್ದೇವೆ ಅದು ಸಂಪೂರ್ಣವಾಗಿ ಸಾಕಾಗುವುದಿಲ್ಲ. ಮಕ್ಕಳ ಸಂಖ್ಯೆಗನುಗುಣವಾಗಿ ಇನ್ನೂ ಹೆಚ್ಚು ಬೇಕು.

ಆದಷ್ಟು ಜಾಗ್ರತೆ ಇನ್ನೂ ಕೆಲವು ಜನ ಉಪಾಧ್ಯಾಯರುಗಳನ್ನು ತೆಗೆದುಕೊಳ್ಳತಕ್ಕ ವ್ಯವಸ್ಥೆ ಸರ್ಕಾರದ ಗಮನದಲ್ಲಿದೆ. ಶಾಲಾ ಕಟ್ಟಡಗಳ ಬಗ್ಗೆ ಹೇಳಬೇಕೆಂದರೆ ಅಲ್ಲಿ ೧೯ ಶಾಲಾ ಕಟ್ಟಡಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ. ಅದಕ್ಕೆ ರಿಪೇರಿ ಮಾಡಿಸಿಲ್ಲವೆಂದು ಮಾನ್ಯ ಸದಸ್ಯರು ತಿಳಿಸಿದ್ದಾರೆ. ಅದು ನಿಜ. ಬಹಳ ವರ್ಷಗಳಿಂದ ಈ ಶಾಲಾ ಕಟ್ಟಡಗಳನ್ನು ಬಾಡಿಗೆಗೆ ತೆಗೆದುಕೊಂಡಿದ್ದು ಮಾಲೀಕರು ರಿಪೇರಿ ಮಾಡಿಸಿಕೊಡುತ್ತಿಲ್ಲ. ಹೇಗಾದರೂ ಮಾಡಿ ತಮ್ಮ ಸಂಪರ್ದಿಗೆ ಕಟ್ಟಡವನ್ನು ತೆಗೆದುಕೊಳ್ಳಲು ಮಾಲೀಕರು ಪ್ರಯತ್ನಪಡುತ್ತಿರುವುದರಿಂದ ರಿಪೇರಿ ಮಾಡಿಸಲು ಅವರು ಮುಂದೆ ಬರುತ್ತಿಲ್ಲ. ನಾವು ಆ ಕಟ್ಟಡಗಳಿಗೆ ಯಾವುದೇ ರೀತಿಯಲ್ಲಿ ಹಣ ಖರ್ಚು ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅನೇಕ ಸಾರಿ ದಯವಿಟ್ಟು ಆ ಕಟ್ಟಡಗಳನ್ನು ರಿಪೇರಿ ಮಾಡಿಸಿ ಎಂದು ಮಾಲೀಕರನ್ನು ಪ್ರಾರ್ಥನೆ ಮಾಡಿಕೊಂಡಿದ್ದೇವೆ ಅವರು ಮುಂದೆ ಬರದಿರುವುದರಿಂದ ಇದು ಕಷ್ಟವಾಗಿದೆ. ಕಟ್ಟಡಗಳು ಬೀಳತಕ್ಕ ಪರಿಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತಿದ್ದಾರೆ.

ಶ್ರೀ ಪಂಪಾಪತಿ.— ಮಾನ್ಯ ಮಂತ್ರಿಗಳು ಎಲ್ಲವನ್ನೂ ಒಪ್ಪಿಕೊಳ್ಳುತ್ತಾರೆ. ಗಮನಕ್ಕೆ ಬಂದಿದೆ ಕಟ್ಟಡಗಳು ಬೀಳತಕ್ಕ ಸ್ಥಿತಿಯಲ್ಲಿವೆ, ಆದರೆ ಸರ್ಕಾರ ರಿಪೇರಿ ಮಾಡತಕ್ಕ ವ್ಯವಸ್ಥೆ ಮಾಡಿಲ್ಲ ಎಂದು ಹೇಳಿದರೆ ಏನರ್ಥ ? ಒಂದು ವೇಳೆ ಕಟ್ಟಡ ಬಿದ್ದರೂ ಮಕ್ಕಳು ಏನಾಗಬಹುದು ಎಂಬುದನ್ನು ಅವರೇ ಹೇಳಬೇಕು. ಅಂಥ ಕಟ್ಟಡಗಳನ್ನು ಕೂಡಲೇ ತೆರವು ಮಾಡಬೇಕು. ಅಥವಾ ರಿಪೇರಿ ಮಾಡಬೇಕು. ಇದು ಮಕ್ಕಳ ಪ್ರಶ್ನೆ ಆಗಿದ್ದರಿಂದ ಈ ಬಗ್ಗೆ ಮಾನ್ಯ ಮಂತ್ರಿಗಳು ಹೇಳಬೇಕು. ದಾವಣಗೆರೆಯಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ ಇವೊತ್ತು ೨೯ ಇದೆ. ಪ್ರೌಢಶಾಲೆಗಳ ಸಂಖ್ಯೆ ೫ ಇದೆ. ಪ್ರೌಢಶಾಲೆಗಳ ಸಂಖ್ಯೆ ಕಡಿಮೆ ಇದೆ. ಇದರಿಂದ ಮಕ್ಕಳಿಗೆ ಸ್ಥಳಾವಕಾಶ ಸಿಗದೆ ಬಹಳ ತೊಂದರೆಯಾಗಿದೆ. ಒಂದೊಂದು ತರಗತಿಯಲ್ಲಿಯೂ ೭೦, ೮೦, ೯೦ ಜನ ಇದ್ದಾರೆ. ಆದ್ದರಿಂದ ಈ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿ ಪ್ರೌಢಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವುದಕ್ಕೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಎಚ್. ಜಿ. ಗೋವಿಂದೇಗೌಡ –ಕಟ್ಟಡಗಳು ಬೀಳತಕ್ಕ ಪರಿಸ್ಥಿತಿಯಲ್ಲಿರುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದೀರಿ. ಸರ್ಕಾರಕ್ಕೂ ಇದರ ಬಗ್ಗೆ ಕಾಳಜಿ ಇದೆ. ನಾವೂ ಸಹ ವ್ಯವಸ್ಥೆ ಮಾಡುತ್ತೇವೆ ಬೀಳತಕ್ಕ ಪರಿಸ್ಥಿತಿಯಲ್ಲಿರತಕ್ಕ ಕಟ್ಟಡಗಳನ್ನು ಬೇರೊಂದು ಬಾಡಿಗೆ ಕಟ್ಟಡಕ್ಕೆ ವರ್ಗಾವಣೆ ಮಾಡಲು ಸೂಕ್ತ ಕ್ರಮ ಕೈಗೊಂಡಿದ್ದೇವೆ. ಮಾನ್ಯ ಶಾಸಕರೂ ಕೂಡ ಸಹಕಾರ ಕೊಟ್ಟು ಆ ಪ್ರದೇಶದಲ್ಲಿ ಬಾಡಿಗೆ ಕಟ್ಟಡಗಳನ್ನು ಸರ್ಕಾರಕ್ಕೆ ಕೊಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಉಪಾಧ್ಯಾಯರ ಕೊರತೆಯನ್ನು ಆದಷ್ಟು ಜಾಗ್ರತೆ ನಿವಾರಣೆ ಮಾಡುವುದಕ್ಕೆ ಕಾಂಟ್ರಾಕ್ಟ್ ಬೇಸಿಸ್ ಮೇಲೆ ಉಪಾಧ್ಯಾಯರನ್ನು ನೇಮಕ ಮಾಡಲು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇವೆ. ಸಾಧ್ಯವಾದಷ್ಟು ಬೇಗ ಉಪಾಧ್ಯಾಯರನ್ನು ನೇಮಕ ಮಾಡತಕ್ಕ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಪಂಪಾಪತಿ.— ಬೇಕಾದಷ್ಟು ಜನ ಉಪಾಧ್ಯಾಯರು ಕೆಲಸವಿಲ್ಲದೆ ನಿರುದ್ಯೋಗಿಗಳಾಗಿದ್ದಾರೆ ಇವೊತ್ತು ಶಾಲೆಗಳಲ್ಲಿ ಉಪಾಧ್ಯಾಯರಿಲ್ಲ. ಮಕ್ಕಳ ಸಂಖ್ಯೆ ಹೆಚ್ಚಾಗಿದೆ. ಉಪಾಧ್ಯಾಯರ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ ಹೆಚ್ಚು ಉಪಾಧ್ಯಾಯರನ್ನು ಕೂಡಲೇ ನೇಮಕ ಮಾಡಿದರೆ ಅವರಿಗೂ ಉದ್ಯೋಗ ಒದಗಿಸಿದಂತೆ ಆಗುತ್ತದೆ, ಮಕ್ಕಳಿಗೂ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ನಮ್ಮ ದೇಶದಲ್ಲಿ ಮತ್ತು ರಾಜ್ಯದಲ್ಲಿ ವಿದ್ಯಾವಂತರ ಸಂಖ್ಯೆ ಜಾಸ್ತಿಯಾಗಬೇಕೆಂದು ಹೇಳುತ್ತಿರುವಾಗ ಅದಕ್ಕೆ ಬೇಕಾದ ಕಾರ್ಯಕ್ರಮವನ್ನು ರೂಪಿಸಿಕೊಳ್ಳಬೇಕಾದರೆ ಸಂಖ್ಯೆಯನ್ನು ಹೆಚ್ಚು ಮಾಡಿ ವಿದ್ಯಾಭ್ಯಾಸಕ್ಕೆ ಅನುವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ.— ಆದಷ್ಟು ಜಾಗ್ರತೆ ಕ್ರಮ ಕೈಗೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ.

ಪ್ರಶ್ನೆ ಸಂಖ್ಯೆ : ೧೪೨(೩೦೯)

ಸದಸ್ಯರು ಹಾಜರಿರಲಿಲ್ಲ.

ಪ್ರಶ್ನೆ ಸಂಖ್ಯೆ ; ೧೪೩(೪೨೯)

ಸದಸ್ಯರು ಹಾಜರಿರಲಿಲ್ಲ,